# ಸೌಹಾರ್ದ

ಇನ್ನೊಂದು ಧರ್ಮದ ಅನುಯಾಯಿಗಳೊಡನೆ, ಇನ್ನೊಂದು ಪಕ್ಷದವರೊಡನೆ, ನಮ್ಮದಲ್ಲದ ತಮ್ಮದೇ ನಂಬಿಕೆಯನ್ನು ಹೊಂದಿರುವ ಇನ್ನೊಂದು ಪಂಗಡದವರೊಡನೆ ಹೇಗೆ ವ್ಯವಹರಿಸಬೇಕೆನ್ನುವುದು ನಾಗರಿಕತೆಯ ಮೊನಚಿನ ಪ್ರಶ್ನೆಯಾಗಿದೆ. ಸಣ್ಣ– ದೊಡ್ಡ ನಗರಗಳಲ್ಲಿ ಎಲ್ಲರೂ ಕಲೆತು– ಗುರುತಿರಲಿ; ಇಲ್ಲದಿರಲಿ –ಪರಸ್ಪರ ಮುಖ ನೋಡುತ್ತ– ಬದುಕುವುದು ಅನಿವಾರ್ಯವಾದ, ಸಂವಹನ ತಂತ್ರಜ್ಞಾನದಲ್ಲಿ ಕ್ರಾಂತಿಯೇ ನಡೆದಿರುವ ಇಂದಿನ ಆಧುನಿಕ ಸಂದರ್ಭದಲ್ಲಿ ನಾಗರಿಕತೆಯೇ ಹೊಸ ತಿರುವೊಂದನ್ನು ಪಡೆಯಲು ಹವಣಿಸುತ್ತಿದೆ ಎನ್ನಬಹುದು. ಸಂವಹನ ತಂತ್ರಜ್ಞಾನದ ತಾತ್ವಿಕತೆ ಏನಾಗಿರುವುದು ಸಾಧ್ಯ? ಅಸಂಖ್ಯ ಮಾಹಿತಿಗಳನ್ನು ಪರಸ್ಪರ ಹಂಚಿಕೊಳ್ಳುತ್ತ ಮತ್ತೆ ಮಾಹಿತಿಗಳ ಮಟ್ಟದಿಂದ ಮೇಲೇರಿ ನನ್ನ ಪಾಡು ಮತ್ತು ನಿನ್ನ ಪಾಡು ಒಂದೇ ಆಗಿದೆ ಎಂಬ ಅರಿವನ್ನು ಹೊಳೆಯಿಸುವುದಲ್ಲದೆ ಬೇರೇನಾಗಿರುವುದು ಸಾಧ್ಯ?

ನಿಸರ್ಗದಲ್ಲಿ ಅದ್ಭುತವಾದ ಸಂವಹನ ಸಾಧ್ಯವಿದೆ. ಪ್ರಕೃತಿಯ ಎಳೆಗಳು ಪರಸ್ಪರ ಸೂಕ್ಷ್ಮವಾಗಿ ಮಿಡಿಯುತ್ತಿವೆ ಎನ್ನುವ ವೈಜ್ಞಾನಿಕ ತಿಳುವಳಿಕೆಯ ತಾರ್ಕಿಕ ಅಂತ್ಯವೆಂದರೆ ಪ್ರಕೃತಿಯ ಜೀವಂತ ಭಾಗಗಳಾಗಿರುವ ನಾನೂ ನೀನೂ ಪರಸ್ಪರ ಸಂವಾದಿಸುತ್ತ ನಿನ್ನನ್ನು ತಿಳಿಯುವುದೆಂದರೆ ಅದು ನನ್ನನ್ನೇ ತಿಳಿದಂತೆ ಎಂಬ ಪರಸ್ಪರ ಅನನ್ಯ ಸಂಬಂಧವನ್ನು ಅರಿಯುವುದೇ ಆಗಿದೆ. ಪ್ರಾಚೀನವಾದ 'ಉಪನಿಷತ್ತು' ಎನ್ನುವ ಪದಕ್ಕೆ ಹತ್ತಿರ ಬಾ; ಹತ್ತಿರ ಕೂತು ಮಾತಾಡೋಣ ಎಂದೇ ಅರ್ಥ. ಹತ್ತಿರ ಕೂತಿರುವುದೆಂದರೆ ನಮ್ಮ ಪಾಡು ಒಂದೇ ಆಗಿದೆ ಎಂಬ ಹೊಳಹನ್ನು ಪಡೆಯುವುದೇ. ಇನ್ನೊಂದು ಪಂಗಡಕ್ಕೆ ಸೇರಿದವರನ್ನು ನಮ್ಮಂತಲ್ಲದವರು ಎನ್ನುವುದು ಎಷ್ಟು ನಿಜವೋ ಅವರೂ ನಮ್ಮಂತೆಯೇ ಎನ್ನುವುದು ಅದಕ್ಕಿಂತಲೂ ಹೆಚ್ಚು ನಿಜ!

ಪೇಜಾವರ ಶ್ರೀಗಳವರು ಮುಸ್ಲಿಂ ಸೋದರರನ್ನು ತಮ್ಮ ಹತ್ತಿರಕ್ಕೆ ಕರೆದಿದ್ದಾರೆ. ಈದ್ ಸೌಹಾರ್ದಕೂಟವನ್ನು ತಮ್ಮ ಕೃಷ್ಣ ಮಠದಲ್ಲಿ ಈ ವರ್ಷ ಆಚರಿಸಿದ್ದಾರೆ. ಮುಸ್ಲಿಂ ಬಾಂಧವರೂ ಈ ಕರೆಗೆ ಸಹೃದಯತೆಯಿಂದಲೇ ಓಗೊಟ್ಟಿದ್ದಾರೆ. ಈಗ ಈ ಉಪಕ್ರಮದ ಕುರಿತಂತೆ ವಿವಾದಗಳೆದ್ದಿವೆ. ಹೌದು; ಇಂಥ ಸೌಹಾರ್ದಕೂಟಗಳು ಪ್ರತಿ ವರ್ಷವೂ ನಡೆಯಬೇಕಾದದ್ದು– ಇದೊಂದು ಧಾರ್ಮಿಕ; ಸಾಮಾಜಿಕ ಕರ್ತವ್ಯವೆಂಬಂತೆ. ಕೆಲವೊಮ್ಮೆ ಪರಿಸ್ಥಿತಿ ವಿಕಟವಿದ್ದರೂ ಇಂಥದ್ದನ್ನು ಬಿಡಲಾಗದು. ಏಕೆಂದರೆ ನಮ್ಮ ಸೌಹಾರ್ದದ ಪರೀಕ್ಷೆ ನಡೆಯುವುದೇ ಇಂಥ ಸಂದರ್ಭಗಳಲ್ಲಿ. ಸೌಹಾರ್ದದ ನಿಲುವೂ ಪರೀಕ್ಷೆಗೆ ಒಳಪಡಬೇಕಲ್ಲವೇ?

ಹಾಗಲ್ಲದೆ ಲಹರಿ ಬಂದಾಗೊಮ್ಮೆ ಇಂಥ ಕೂಟಗಳನ್ನು ಏರ್ಪಡಿಸುವುದಾದರೆ ಆಗ ಈ ಲಹರಿಗೆ ಬೇರೆ ವ್ಯಾವಹಾರಿಕ ಕಾರಣಗಳಿರಬಹುದು ಎಂದು ಸಂದೇಹಿಸುವವರೂ ಇರುತ್ತಾರೆ!

ಅಲ್ಲದೆ ಶ್ರೀಗಳವರು ನೀಡಿರುವ ಸ್ಪಷ್ಟೀಕರಣವೂ ನಿಚ್ಚಳವಾಗಿಲ್ಲ. ಮನಬಿಚ್ಚಿ ಮಾತಾಡಿದಂತಿಲ್ಲ. ಹಸಿದು ಬಂದವರಿಗೆ ಅನ್ನದಾನ ಮಾಡುವಲ್ಲಿ ಪಾತ್ರಾಪಾತ್ರ ವಿವೇಚನೆ ಮಾಡಕೂಡದು ಎಂಬ ಶಾಸ್ತ್ರದ ಮಾತನ್ನು ಸ್ವಾಮಿಗಳು ಉಲ್ಲೇಖಿಸುತ್ತಾರೆ. ಈ ಮಾತು ಉದಾತ್ತವಾಗಿದೆ ನಿಜ. ಆದರೆ ಈ ಸಂದರ್ಭದಲ್ಲಿ ಉಲ್ಲೇಖಿಸಬೇಕಾದ ಮಾತಲ್ಲ ಅದು. ಮುಸ್ಲಿಂ ಬಂಧುಗಳು ನೀವು ಕರೆದು, ನಿಮ್ಮ ಕರೆಗೆ ಓಗೊಟ್ಟು ಬಂದವರಲ್ಲವೆ? ಅವರ ಮುಂದೆ ಅನ್ನದಾನದ ಮಾತೇಕೆ? ಪಾತ್ರಾಪಾತ್ರಗಳ ಮಾತೇಕೆ? ಶಾಸ್ತ್ರ ಭೀರು ಹಿಂದುಗಳನ್ನು ಮೆಚ್ಚಿಸಲೆಂದು ಆಡಿರಬಹುದಾದ ಈ ಮಾತು ನಿಜಕ್ಕೂ ಮುಜುಗರ ಹುಟ್ಟಿಸುವ ಮಾತು.

ಸ್ವಾಮಿಗಳಿತ್ತ ಆಹಾರವನ್ನು ಸ್ವೀಕರಿಸುವ ಮುನ್ನ ಮುಸ್ಲಿಮರು ತಮ್ಮ ಧರ್ಮವಿಧಿಯಂತೆ ನಮಾಜು ಮಾಡಿದರು. ನಮಾಜು ಮಾಡಿದ ಜಾಗ, ಕೃಷ್ಣಮಠಕ್ಕೆ ನೇರವಾಗಿ ಸೇರಿದ ಜಾಗವಲ್ಲ, ಅದು ಸಾರ್ವಜನಿಕ ಸ್ಥಳ ಎಂದು ಸ್ವಾಮಿಗಳು ತಮ್ಮ ಟೀಕಾಕಾರರಿಗೆ ಉತ್ತರ ಕೊಟ್ಟಿದ್ದಾರೆ! ಅದು ಸಾರ್ವಜನಿಕವಾದ ಸ್ಥಳ ಎಂದು ಮುಸ್ಲಿಮರಿಗಾದರೂ ಖಂಡಿತ ತಿಳಿದಿರಲಿಕ್ಕಿಲ್ಲ. ಅದು ಕೃಷ್ಣಮಠದ ಸಂಕೀರ್ಣದೊಳಗೇ ಇರುವುದರಿಂದ ಈ ಜಾಗ ಕೃಷ್ಣಮಠದ್ದೆಂದೇ ಅವರು ತಿಳಿದಿರುವ ಸಂಭವವೇ ಹೆಚ್ಚು. ಆದರೂ ತಮ್ಮ ಪದ್ಧತಿಯಂತೆ ಅವರು ನಮಾಜು ಮಾಡಿದ್ದಾರೆ. ಇಸ್ಲಾಂ, ವಿಗ್ರಹಾರಾಧನೆಯನ್ನು ಒಪ್ಪುವುದಿಲ್ಲ– ನಿಜ. ಆದರೂ, ಕೃಷ್ಣವಿಗ್ರಹದ ತೀರ ಸನಿಯದಲ್ಲಿ ಅಲ್ಲದಿದ್ದರೂ, ಅದರ ಆಸು ಪಾಸಿನಲ್ಲಿ , ಕೃಷ್ಣನ ವಿಗ್ರಹ ಇಲ್ಲೇ ಹತ್ತಿರದಲ್ಲಿದೆ ಎಂದು ಚೆನ್ನಾಗಿ ತಿಳಿದೂ, ಮುಸ್ಲಿಮರು ಅಲ್ಲಿ ನಮಾಜು ಸಲ್ಲಿಸಿದರು! ಇದು ಪೇಜಾವರಶ್ರೀಗಳ ಕರೆಗೆ ಮುಸ್ಲಿಂ ಸೋದರರ ಹಾರ್ದಿಕ ಸ್ಪಂದನವಲ್ಲವೆ! ಈ ಬಗೆಗೆ ಶ್ರೀಗಳವರೇಕೆ ಅಳುಕಿನಿಂದ ಮಾತಾಡಬೇಕೋ ತಿಳಿಯದಾಗಿದೆ.

ಹಿಂದೂಧರ್ಮ ವಿಗ್ರಹಾರಾಧನೆಯನ್ನು ಮಾನ್ಯ ಮಾಡುತ್ತದೆ ಎಂಬುದು ನಿಜ. ಆದರೆ ಅದರೊಳಗೇ ವಿಗ್ರಹಾರಾಧನೆಯ– ಪ್ರತಿಮಾಪೂಜೆಯ– ಕುರಿತು ವಿಮರ್ಶಾತ್ಮಕವಾದ ಮಾತುಗಳೆಷ್ಟಿಲ್ಲ? ಹಿಂದೂಧರ್ಮವನ್ನು ತಿಳಿಯುವುದು ಖಂಡಿತ ಸುಲಭದ ಮಾತಲ್ಲ. ಅಥವಾ ಸುಲಭವೂ ಹೌದು; ಕರಕಷ್ಟವೂ ಹೌದು. ಏಕೆಂದರೆ ಹಿಂದೂಧರ್ಮ ತನ್ನ ಪ್ರಮೇಯ ಪ್ರೀತಿಯ ಜೊತೆಗೇ ಎಲ್ಲ ಪ್ರಮೇಯಗಳನ್ನೂ ಸಿದ್ಧಾಂತಗಳನ್ನೂ ಮೀರಿದ, ನಾಮ ರೂಪಗಳಿಗೆ ಅತೀತವಾದುದರ ದೊಡ್ಡದೊಂದು ಶೋಧನೆಯೂ ಹೌದು. ಆದುದರಿಂದಲೇ ಇಲ್ಲಿ ಎಲ್ಲವನ್ನೂ ಒಳಗೊಳ್ಳುವುದು– ನಿಜವಾದ ಸೌಹಾರ್ದ– ಸುಲಭ. ಆದರೆ ಸುಲಭವೆಂದುಕೊಂಡದ್ದೆಲ್ಲವೂ ಕೇವಲ ಮೇಲ್ನೋಟದ್ದಾಗಿ, ತೋರಿಕೆಯದಾಗಿ, ಬರಿಯ ನಾಟಕವಾಗಿ ಬಿಡುವುದೂ ಹೌದು. ಹಾಗಾಗಿಬಿಡದಂತೆ ನೋಡಿಕೊಳ್ಳುವ ಜವಾಬುದಾರಿ ಕೂಡ ನಮ್ಮದೇ.

ಅಷ್ಟೇಕೆ? ಗೀತೆಯಲ್ಲಿ ಕೃಷ್ಣನ ಮಾತೇ ಇದೆ. "ಯೇ ಯಥಾ ಮಾಂ ಪ್ರಪದ್ಯಂತೇ ತಾನ್ ತಥೈವ ಭಜಾಮ್ಯಹಂ" ಯಾರು ಹೇಗೆ ನನ್ನನ್ನು ಪೂಜಿಸುವರು ಹಾಗೆ ಅವರ ದಾರಿಯಲ್ಲೇ ನಾನವರಿಗೆ ಒಲಿಯುವೆನು. ದಾರಿಯನ್ನು ಬದಲಿಸುವ ಅಗತ್ಯವನ್ನು ಸೂಚಿಸದೆ ಅವರ ದಾರಿಯಲ್ಲೇ ಸಮ್ಮುಖವಾಗುವೆನು ಎಂಬ ಮಾತು. ಇದು ಆಳುವ ಧಾಟಿಯ ಮಾತಾಗಿ ಕೇಳಿಸುವುದಿಲ್ಲ. ನಿಮಗೊಲಿಯದೆ ನಾನಿರಲಾರೆನೆಂಬ ತನ್ನ ಪಾಡನ್ನು ತೋಡಿಕೊಳ್ಳುವ ಮಾತಾಗಿ ಕೇಳಿಸುವುದು. ನೀವೊಮ್ಮೆ ನನ್ನ ಕಡೆ ನೋಡಬಾರದೆ ಎಂಬ ಆರ್ತತೆಯ ಮಾತಾಗಿ ಕೇಳಿಸುವುದು. ನಾನು ನಿಮ್ಮನ್ನು ನಿರೀಕ್ಷಿಸುತ್ತಲೇ ಇದ್ದೇನೆ ; ನೀವೇಕೆ ತಡಮಾಡುವಿರಿ ಎಂಬ ಪ್ರೀತಿಯ ಆಕ್ಷೇಪದ ಮಾತಾಗಿಯೂ ಕೇಳಿಸುವುದು. ಇದಕ್ಕಿಂತ ಹೆಚ್ಚಿನ ಸೌಹಾರ್ದದ ಮಾತೇನು?

ಅವನಂತಿಲ್ಲದ ನಮ್ಮೊಡನೆ ದೇವರು ಆಡುವ ಮಾತು ನಾವು ನಿಜವಾಗಿ ಕೇಳಿಸಿಕೊಂಡರೆ, ನಮ್ಮಂತೆ ಇಲ್ಲವೆಂದು ನಾವು (ತಪ್ಪು) ತಿಳಿದ, ಪರರೆಂದು ತಿಳಿದ, ಮನುಷ್ಯರೊಡನೆ ನಾವು ಆಡಬೇಕಾದ ಮಾತಾಗಿಯೂ ಅದು ಇರುತ್ತದೆ! ಒಂದು ಹಂತದಲ್ಲಿ ದೇವರ ಪಾಡು, ನಮ್ಮ ಪಾಡು ಒಂದೇ ಆಗಿರುವಂತೆ ಹೊಳೆದು ಉದ್ವಿಗ್ನವಾಗುತ್ತದೆ– ಮನಸ್ಸು.

ಪೇಜಾವರ ಶ್ರೀಗಳವರು ಅಯೋಧ್ಯೆಯಲ್ಲಿ ರಾಮಮಂದಿರದ ಪುನರ್ನಿರ್ಮಾಣದ ನೇತಾರರಲ್ಲಿ ಓರ್ವರು. ಅವರು ಕೃಷ್ಣ ಮಂದಿರದೊಳಕ್ಕೆ ಮುಸ್ಲಿಮರನ್ನು ಬರಮಾಡಿಕೊಂಡಿದ್ದಾರೆ. ಪ್ರಾಯಃ ಶ್ರೀಗಳವರ ಉದ್ದೇಶವನ್ನೂ ಮೀರಿ ನಮಾಜು ನಡೆದೇ ಬಿಟ್ಟಿದೆ! ಉದ್ದೇಶಿತ ರಾಮಮಂದಿರದಲ್ಲೂ ಹೀಗೆ– ಆದರೆ ಉದ್ದೇಶಪೂರ್ವಕವಾಗಿ–ಎಲ್ಲರ ಸೌಹಾರ್ದ ಭಾವದ ಕೆನೆಯೆಂಬಂತೆ– ನಮಾಜು ನಡೆಯಬಾರದೆ!

**■ ತೋಷ**

## ಮಾತೇ ಮುತ್ತು

★ ಹೆಚ್ಚು ಕಷ್ಟ ಪಟ್ಟು ದುಡಿದಷ್ಟೂ ಅದೃಷ್ಟ ಹೆಚ್ಚಾಗಿ ನಿಮ್ಮನ್ನು ಒಲಿಯುತ್ತದೆ.

–ಥಾಮಸ್ ಜಫರ್ಸನ್

★ ಶಾಲೆಯಲ್ಲಿ ಕಲಿತದ್ದು ಮರೆತ ಬಳಿಕವೂ ನೆನಪಲ್ಲಿ ಉಳಿಯುವುದೇ ಶಿಕ್ಷಣ.

-ಆಲ್ಬರ್ಟ್ ಐನ್‌ಸ್ಟೀನ್

★ ಬಹಳಷ್ಟು ಜನರಿಗೆ ಸ್ವಾತಂತ್ರ್ಯ ಬೇಕಿಲ್ಲ. ಏಕೆಂದರೆ ಸ್ವಾತಂತ್ರ್ಯದ ಜತೆಗೆ ಜವಾಬ್ದಾರಿಯೂ ಇರುತ್ತದೆ. ಬಹಳಷ್ಟು ಜನ ಜವಾಬ್ದಾರಿಯ ಬಗ್ಗೆ ಭಯ ಹೊಂದಿದ್ದಾರೆ.

-ಸಿಗ್ಮಂಡ್ ಫ್ರಾಯ್ಡ್

★ ಮುಗ್ಧರ ನಂಬಿಕೆಯೇ ಮೋಸಗಾರರ ಬಲವಾದ ಆಯುಧ.

-ಸ್ಟೀಫನ್ ಕಿಂಗ್

★ ಮಹತ್ವಾಕಾಂಕ್ಷೆ ಇಲ್ಲದ ಬುದ್ಧಿವಂತಿಕೆ ರೆಕ್ಕೆಗಳಿಲ್ಲದ ಹಕ್ಕಿಯಂತೆ.

-ಸಾಲ್ವಡೋರ್ ಡಾಲಿ